ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಶುಕ್ರವಾರ, ದಿನಾಂಕ 19ನೇ ಜುಲೈ, 2019

ಗುಡಿಸಲು ಮುಕ್ತ ಮಾಡುವ ಸರ್ಕಾರದ ವಸತಿ ಯೋಜನೆಗಳು ವಾರ್ಷಿಕ ಗುರಿ ತಲುಪಲು ವಿಳಂಬವಾಗುತ್ತಿರುವ ಬಗ್ಗೆ

ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

375 (426) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯವನ್ನು ಗುಡಿಸಲು ಮುಕ್ತ ಮಾಡುವ ಸರ್ಕಾರದ "ವಸತಿ ಯೋಜನೆಗಳು" ವಾರ್ಷಿಕ ಗುರಿ ತಲುಪಲು ವಿಳಂಬವಾಗುತ್ತಿರುವುದು ನಿಜವೇ ;

(ಆ) ಪ್ರಸಕ್ತ ವರ್ಷದಲ್ಲಿ ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳಾವುವು; ಇವು ಯಾವಾಗ ಜಾರಿಗೆ ಬರುತ್ತವೆ; 2017-18, 2018-19ರಲ್ಲಿ ರಾಜ್ಯ ಸರ್ಕಾರವು ವಿವಿಧ ವಸತಿ ಯೋಜನೆಗಳಡಿಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸುವ ಗುರಿ ಹಾಕಿಕೊಂಡಿತ್ತು; ಎಷ್ಟು ಮನೆಗಳನ್ನು ನಿರ್ಮಿಸಿ ಅರ್ಹರಿಗೆ ಹಂಚಿಕೆ ಮಾಡಲಾಗಿದೆ ; ಎಷ್ಟು ಬಾಕಿ ಉಳಿದಿವೆ ; (ವರ್ಷವಾರು ಹಾಗೂ ಯೋಜನೆವಾರು ವಿವರ ನೀಡುವುದು)

(ಇ) ಅದರಲ್ಲಿ ಮನೆಗಳನ್ನು ನಿರ್ಮಿಸಿಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು; ಪ್ರಗತಿಯಲ್ಲಿರುವ ಮನೆಗಳ ಸಂಖ್ಯೆ ಎಷ್ಟು ; ಮನೆಗಳನ್ನು ನಿರ್ಮಿಸಿಕೊಳ್ಳದ ಫಲಾನುಭವಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಈ) 2017-18, 2018-19ರಲ್ಲಿ ಬೆಳಗಾವಿ ಜಿಲ್ಲೆಗೆ ದೇವರಾಜ ಅರಸು ವಸತಿ ಯೋಜನೆಯಡಿ ಎಷ್ಟು ಗುರಿ ನಿಗಧಿಪಡಿಸಲಾಗಿತ್ತು; ಇದರಲ್ಲಿ, ಎಷ್ಟು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ; ಎಷ್ಟು ಗುರಿ ಪೂರ್ಣಗೊಂಡಿದೆ; ನಿಗಧಿತ ಗುರಿಯಲ್ಲಿ ಎಷ್ಟು ಬಾಕಿ ಉಳಿದಿವೆ; (ವರ್ಷವಾರು, ತಾಲ್ಲೂಕುವಾರು ವಿವರ ನೀಡುವುದು)

(ಉ) ಸದರಿ ಯೋಜನೆಯಡಿ ವಸತಿ ಸಮಿತಿಯ ಆಯ್ಕೆ ಮಾಡಿದ ವಿಶೇಷ ವರ್ಗದ ಫಲಾನುಭವಿಗಳು (ಅಂಗವಿಕಲರು ಹಾಗೂ ವಿಧವೆಯರು) ಜಿ.ಪಿ.ಎಸ್. ಮಾಡಲು ವಿಳಂಬವಾಗಿ, ಗುರಿ ಪಡೆದಿದ್ದರೂ ಯೋಜನೆಯ ಫಲ ಸಿಗದೆ ಅತಂತ್ರ ಸ್ಥಿತಿಯಲ್ಲಿದ್ದು. ಅತಂತ್ರ ಸ್ಥಿತಿಯಲ್ಲಿದವರಿಗೆ ನ್ಯಾಯ ಒದಗಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)